
# ಅನುಬಂಧ ಭಾಗ




**ಪೌಲನ ಪ್ರಥಮ ಸುವಾರ್ತಾ ಪ್ರಯಾಣಗಳು**




ಪೌಲನ ಮೊದಲನೆ ಮತ್ತು ಎರಡನೇ ಸೇವೆಯ ಪ್ರಯಾಣಗಳು

# ಸಹಕಾರ: ನಿಯಮಗಳೇ ಅಥವಾ ಪ್ರೀತಿಯೇ?

ನಾನು ಆಸ್ಟ್ರೇಲಿಯದಲ್ಲಿ ಕಾರ್ಯನಿರ್ವಹಿಸುವಾಗ, ಸಭೆಗಳಲ್ಲಿ ಬೋಧಿಸುತ್ತಿದ್ದ ಕೆಲವರು ಕೆಲವು ವಿಷಯಗಳಲ್ಲಿ ಮಾತ್ರ ಸಹಕಾರ ನೀಡುವೆವು ಎಂಬುದಾಗಿ ಹೇಳು ತ್ತಿದ್ದವರೊಂದಿಗೆ ಸಂಪರ್ಕಮಾಡಿ ಚರ್ಚೆಯನ್ನು ಮಾಡುತ್ತಿದ್ದೆನು. ಆ ಸಮಯದಲ್ಲಿ ನಾನು ಸಂಬಂಧಪಟ್ಟ ಮೂರು ಪುಸ್ತಕಗಳನ್ನು ಬರೆದೆನು (ಈಗ ಅವುಗಳು ಮುದ್ರಿತ ವಾಗುತ್ತಿಲ್ಲ). ಆ ವಿಷಯದ ಬಗ್ಗೆ ನಾನು ಕೆಲವು ಸಂಗತಿಗಳನ್ನು ಕಲಿತುಕೊಂಡೆನು. ಮೊದಲನೆಯದಾಗಿ, ಸಹಕಾರ ನೀಡಲು ವಾಕ್ಯದ ಹಿನ್ನಲೆಯಿರುವ ಸಂಗತಿಗಳನ್ನು ಮಾತ್ರ ಅವರು ಒಪ್ಪಿಕೊಳ್ಳುತ್ತಿದ್ದರು. ಅವರುಗಳು, "ಹೊಸ ಒಡಂಬಡಿಕೆಯ ಸಭಾಯೋಜನೆಗೆ ಸಹಕಾರವನ್ನು ನೀಡುವದರಲ್ಲಿ ಸಹಕಾರವನ್ನು ತೋರುತ್ತಿರಲಿಲ್ಲ." ಈ ವಿಷಯದಲ್ಲಿ ಚರ್ಚಿಸಲು ಮಂದಾದಾಗ ಆ ವ್ಯಕ್ತಿಯು ಏಕೆ ನಂಬಿದನು ಎಂದು ಮೊಲನೆಯದಾಗಿ ಯೋಚಿಸಬೇಕಿತ್ತು.

ಪ್ರಮುಖವಾದ ವಿಷಯವೇನೆಂದರೆ ಸಭೆಯ ಸಹಕಾರದ "ಯೋಜನೆಯು" ಇರುವದಿಲ್ಲ ವೆಂಬ ವಿಷಯವನ್ನು ನಾನು ಕಲಿತುಕೊಂಡೆನು. ಸಭೆಯ ಕುರಿತಾಗಿಯೂ ಮತ್ತು ಸ್ಥಳೀಯ ಸಭೆಯ ಕ್ರಮವು ಮಾನವನ ಸಂಘಟನೆ ಅಥವಾ ಸಭಾ ಸಂಘಟನೆಯನ್ನು ನಿರಾಕರಿಸುತ್ತದೆ. ಆದರೆ ಅದರಲ್ಲಿ ದೇವರ ವಾಕ್ಯಕ್ಕೆ ಅನುಗುಣ ವಾದ ಸಹಕಾರವು ಇರುತ್ತದೆ. ವಿನಃ; "ಸಭಾ ಸಹಕಾರಕ್ಕೆ ತೀವ್ರವಾದ ಸಭಾಯೋಜನೆಯು ಇರುವದಿಲ್ಲ."

ಕೆಲವರು "ಯೆರೂಸಲೇಮಿನ ಬಡ ದೇವ ಜನರಿಗಾಗಿ" ತೆಗೆದುಕೊಂಡು ಹೋದ ದ್ರವ್ಯದ ವಿಷಯವನ್ನು "ತೀವ್ರವಾದ ಯೋಜನೆಯೆಂದು" ಪರಿಗಣಿಸುತ್ತಾರೆ (ರೋಮಾಪುರ 15:26), ಈ ವಿಧವಾದ "ಸಭಾ ಸಹಕಾರದ ತೀವ್ರವಾದ ಯೋಜನೆ" ಎಂಬ ವಿಷಯವು ಇರುವದಿಲ್ಲ. ಅಪೊಸ್ತಲ ಕೃತ್ಯಗಳು 11:27-30 ಅಂತಿಯೋಕ್ಯದ *ಸಭೆಯು* ಯೆರೂಸಲೇ ಮಿನ *ಸಭೆಗೆ* ಸಹಾಯವನ್ನು ಕಳುಹಿಸಿತು ಎಂದು ಹೇಳುತ್ತಿರುವದಿಲ್ಲ ಅದರ *ಬದಲಾಗಿ*, ಅಂತಿಯೋಕ್ಯದಲ್ಲಿದ್ದ "ಶಿಷ್ಯರುಗಳು" ಸಹಾಯವನ್ನು ಕಳುಹಿಸಿದರೆಂದು ಹೇಳುತ್ತದೆ. ಪ್ರಾಯಶಃ ಅದು ಸಭಾ ಕ್ರಿಯೆಯಾಗಿರಬಹುದು (ಅಂತಿಯೋಕ್ಯದ "ಪ್ರಥಮ ಪ್ರಸಂಗದಲ್ಲಿ" ಇದನ್ನು ಸೂಚಿಸಿದ್ದೇನೆ). ಆದರೆ ಅದರ ಅಗತ್ಯತೆಯಿರುವದಿಲ್ಲ. ಹಾಗಾದರೆ ಸಭೆಯಿಂದ - ಸಭೆಗೆ ಸಹಕಾರ ಎಂಬ ತೀವ್ರವಾದ ಯೋಜನೆಯ ಕುರಿತು ಮತ್ತು ಅದನ್ನು ಮಾಡುವವರ ಕುರಿತು ಏಕೆ ಮಾತನಾಡಬೇಕು.

ಅಪೊಸ್ತಲ ಕೃತ್ಯಗಳು 11:27-30ರ (11:22 ಒಳಗೊಂಡ) ಹಿನ್ನಲೆಯನ್ನು ಗಮನಿಸುವಾಗ, "ಸಹಕಾರದ ಮಾದರಿಯನ್ನು" ಈ ವಾಕ್ಯಭಾಗದಲ್ಲಿ ಸಮಾನ್ಯವಾ ದದ್ದೆಂದು ಪರಿಗಣಿಸಿ: (1) ಸಭೆಯು ತನ್ನ ಸದಸ್ಯರ ಬಗ್ಗೆಯೇ ಯೋಚಿಸದೇ ಇತರೆ ಸಭೆಯವರ ಬಗ್ಗೆ ಯೋಚನೆ ಮಾಡಬೇಕು. (2) ಸಭೆಗೆ ಅವಕಾಶವು ದೊರೆಯುವಾಗ ಇತರ ಸಭೆಯವರಿಗೆ ಪ್ರೀತಿ ಮತ್ತು ಸಹಾಯವನ್ನು ನೀಡಬೇಕು.

# ಉಪವಾಸ ಮತ್ತು ಕ್ರೈಸ್ತನು

ಉಪವಾಸ ಕುರಿತು ಸತ್ಯವೇದದಲ್ಲಿ ಯಾವುದೇ ಅಪ್ಪಣೆಯನ್ನು ನಾನು ಗಮನಿಸಿರುವದಿಲ್ಲ. ಮೋಶೆಯ ಧರ್ಮಶಾಸ್ತ್ರದಲ್ಲಿ (ಹಳೇ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು). "ಉಪ ವಾಸ" ಎಂಬ ಪದದ ಯಾವುದೇ ಆಕಾರವನ್ನು ನೋಡಿರುವದಿಲ್ಲ. ಆತ್ಮಗಳನ್ನು ತಗ್ಗಿಸುವ ವಿಷಯದಲ್ಲಿ ಮೋಶೆಯ ಧರ್ಮಶಾಸ್ತ್ರವು ಹತ್ತಿರದ ಒಂದು ಯೋಚನೆಯನ್ನು ನೀಡುತ್ತದೆ (ಉದಾಹರಣೆ ಯಾಜಕಕಾಂಡ 16:29, 31). ಆತ್ಮವನ್ನು ದೀನಗೊಳಿಸಲು ಉಪವಾಸ (ಕೀರ್ತನೆ 35:13). ಉಪವಾಸವು ಪಾಪದ ಕ್ರಿಯೆಗಳಿಗೆ ಸಂಬಂಧಪಟ್ಟದ್ದು ಎಂಬುದಾಗಿ ಹಳೇಯ ಒಡಂಬಡಿಕೆಯ ಕೆಲವು ಭಾಗಗಳಲ್ಲಿ ನೋಡುತ್ತೇವೆ. ಜೆಕರ್ಯನ ದಿವಸಗಳಲ್ಲಿ, ಉಪ ವಾಸಕ್ಕಾಗಿ ನಾಲ್ಕನೇಯ ಐದನೇಯ, ಏಳನೇಯ ಮತ್ತು 10ನೇಯ ತಿಂಗಳನ್ನು ನಿಗಧಿಪಡಿಸಿ, ಯೆಹೂದ್ಯರ ಇತಿಹಾಸದಲ್ಲಿ ಜರುಗಿದ ಕೆಲವು ಘಟನೆಗಳನ್ನು ನೆನಪು ಮಾಡಲಾಗುತ್ತಿತ್ತು. ಯೇಸು ಈ ಭೂಲೋಕಕ್ಕೆ ಬಂದ ಸಮಯದಲ್ಲಿ ವಾರ್ಷಿಕ ಉಪವಾಸದ ಸಂಗಡ, ಪರಿಸಾಯರು ವಾರಕ್ಕೆರಡಾವರ್ತಿ ಉಪವಾಸ ಮಾಡುವ ಪದ್ಧತಿಯನ್ನು ಸೇರ್ಪಡೆ ಮಾಡಿದರು (ಲೂಕ 18:12): 5ನೇಯ ದಿವಸ (ಯಾಕಂದರೆ ಮೋಶೆಯು ಕಲ್ಲಿನ ಶಾಸನಗಳನ್ನು ತೆಗೆದುಕೊಂಡು ಬೆಟ್ಟಕ್ಕೆ ಹೋದ ದಿವಸವೆಂದು ನಂಬಲಾಗಿದೆ). ಮತ್ತು ಎರಡನೇಯ ದಿವಸ (ಯಾಕಂದರೆ ಆ ದಿವಸ ಅವನು ಕೆಳಗೆ ಇಳಿದು ಬಂದನೆಂದು ನಂಬಲಾಗಿದೆ).


ಅದು ಅಪ್ಪಣೆಯಾಗದಿದ್ದರೂ, ಮತ್ತಾಯ 6:16-18ರಲ್ಲಿ ಯೇಸು ಸಹ ಅದನ್ನು ಒಪ್ಪಿಕೊಂಡಿರುವನು. ಹೇಗೂ ಅದು ವೈಯಕ್ತಿಕವಾದಂತ ಸಂಗತಿಯೆಂದು ಒತ್ತಿ ಹೇಳಿರುವನು, ದೇವರಿಗೂ ಮತ್ತು ವೈಯಕ್ತಿಕವಾಗಿಯೂ ಇರುವ ನಡುವಿನ ಸಂಗತಿ ಮಾರ್ಕ 2:18-20ರಲ್ಲಿ ಉಪವಾಸದ ಕುರಿತು ಮತ್ತೊಂದು ಸಾರಿ ಯೇಸು ತಿಳಿಸಿರುವನು (ಹೋಲಿಸು ಮತ್ತಾಯ 9:14, 15; ಲೂಕ 5:33-35). ಯೇಸುವಿನ ಶಿಷ್ಯರು ಉಪವಾಸ ಮಾಡಲಿಲ್ಲವೆಂಬುದನ್ನು ಗಮನಿಸಿರಿ. (ಒಂದು ವೇಳೆ ರಕ್ಷಣೆಗೆ ಉಪವಾಸದ ಅಗತ್ಯವಿದಿದ್ದರೆ, ಅವರು ಅದನ್ನು ಖಂಡಿತವಾಗಿ ಮಾಡುತ್ತಿದ್ದರು.) ಇನ್ನೊಂದು ವಿಧದಲ್ಲಿ, ಯೇಸು ಈ ಲೋಕವನ್ನು ತೊರೆದು ಹೋದ ನಂತರ ಅವರು ಉಪವಾಸ ಮಾಡುವರೆಂದು ಮುಂತಿಳಿಸಿದ್ದನು. ಯಾವಾಗ ಮತ್ತು ಎಲ್ಲಿ ಎಂದು ತಿಳಿಸಿರುವದಿಲ್ಲ.

ಈಗ ನಾವು ಕ್ರೈಸ್ತಯುಗದಲ್ಲಿದ್ದೇವೆ. ವೈಯಕ್ತಿಕವಾದ ಭಕ್ತಿಗೆ ಉಪವಾಸವು ಒಂದು ಭಾಗವಾಗಿರುತ್ತದೆಯೆಂಬ ಹೇಳಿಕೆಯನ್ನು ಎಲ್ಲಿಯೂ ನೀಡಿರುವದಿಲ್ಲ (ಪೌಲನಿಗೆ ಆಹಾರವು ದೊರೆಯದೇ ಇರುವಾಗ ಅದನ್ನು ಉಪವಾಸವೆಂದು ಹೇಳಲಾಗುವದಿಲ್ಲ [2 ಕೊರಿಂಥ 6:5; 11:27]). ಕ್ರೈಸ್ತರ ಸ್ವಯಂ ಪ್ರೇರಿತ ಉಪವಾಸದ ಕುರಿತು 2 ವಾಕ್ಯಗಳಿವೆ. ಅಪೊಸ್ತಲ ಕೃತ್ಯಗಳು 13:2, 3 ಮತ್ತು 14:23. ಈ ಎರಡೂ ವಚನಗಳು ಸಭೆಯ ಕಾರ್ಯಕ್ರಮಕ್ಕೆ ಮೀಸಲಾಗಿವೆ. (KJVಯಲ್ಲಿ "ಉಪವಾಸದ" ಕುರಿತು ಅನೇಕ ವಾಕ್ಯಭಾಗಗಳಿವೆ,) ಆದರೆ ಅವುಗಳು ಮಾಡಲೇಬೇಕೆಂಬ ನಿಯಮಕ್ಕೆ ಒತ್ತು ನೀಡುವ ವಾಕ್ಯಗಳಲ್ಲ ಒಂದು ವೇಳೆ ಕ್ರೈಸ್ತರು ಅದನ್ನು ಖಾಸಗಿಯಾಗಿ ಮಾಡುವಾಗ (ಮಾರ್ಕ 2ರ ಪ್ರಕಾರ), ದೇವರು ಆ ಕಾರ್ಯವನ್ನು ತಿಳಿಸಬೇಕೆಂದು ಹೇಳಿರುವದಿಲ್ಲ.

ನನ್ನ ನಿರ್ಣಯಗಳೇನೆಂದರೆ: (1) ಉಪವಾಸವು ಕ್ರೈಸ್ತನಿಗೆ ಖಾಸಗಿಯಾದ ವಿಷಯವಾಗಿದ್ದು ಆಯ್ಕೆಗೂ ಮತ್ತು ಸ್ವಂತ ವಿಚಾರಕ್ಕೂ ಬಿಡಲಾಗಿದೆ. ಉಪವಾಸದ ಕುರಿತು "ನಿಯಮಗಳಿರುವದಿಲ್ಲ" (ಯಾವಾಗ ಅಥವಾ ಹೇಗೆ) ಕೆಲವರು ಉಪವಾಸವನ್ನು ಯೋಜನೆ ಮಾಡಿ, ಆತ್ಮೀಕ ಲಾಭಕ್ಕೆ ಮೂಲವೆಂದು ತಿಳಿಯುತ್ತಾರೆ; ಇತರರು ಆ ರೀತಿಯಾಗಿ

ತಿಳಿಯುವದಿಲ್ಲ. (2) ಉಪವಾಸವು ಪ್ರಾರ್ಥನೆಗೆ ಸಂಬಂಧಪಟ್ಟದ್ದಾಗಿರುತ್ತದೆ. ಕೆಲವರು ದೇವರೊಂದಿಗೆ ಸಂಭಾಷಿಸುವಾಗ ಸಮಯವನ್ನು ಮತ್ತು ಹಸಿವೆಯನ್ನು ಗಮನಿಸುವದಿಲ್ಲ. ನಮ್ಮೆಲ್ಲರಿಗೂ ಈ ವಿಧವಾದ ಪ್ರಾರ್ಥನಾ ಜೀವಿತದ ಅಗತ್ಯವಿರುತ್ತದೆ. (3) ಉಪವಾಸವು ಸ್ವಯಂ ಪ್ರೇರಿತ ಹಾಗೂ ಆಯ್ಕೆಗೆ ಒಳಪಟ್ಟಿದ್ದು, ಕರ್ತನ ಕೆಲಸಕ್ಕೆ ಸಾಮಾನ್ಯವಾದ ನಿಯಮಗಳು ಬಹು ಪ್ರಾಮುಖ್ಯವಾಗಿರುತ್ತವೆ (ಊಟ ಮಾಡುವ ವಿಷಯವು ಸಹ ಪ್ರಮುಖವಲ್ಲ ಮತ್ತಾಯ 6:33). ಉಪವಾಸವಿದ್ದ ಅನೇಕ ದೇವ ಜನರ ಪರಿಚಯವು ನನಗುಂಟು. ಇತರರಿಗೆ ಬೋಧಿಸುವದು ಮತ್ತು ಮುರಿದ ಹೃದಯಗಳನ್ನು ಉತ್ತೇಜಿಸುವದು ಯಥಾರ್ಥ ವಾಗಿರುತ್ತದೆ.

# ಹೆರೋದನ ಮನೆತನ




ಸತ್ಯವೇದ ಅಧ್ಯಯನಕ್ಕೆ ಸಂಬಂಧಪಟ್ಟ ಕುಟುಂಬದ ಸದಸ್ಯರನ್ನು ಮಾತ್ರ ನೇರವಾಗಿ ಇಲ್ಲಿ ತಿಳಿಸಲಾಗಿದೆ. ಹೆರೋದನ ಪ್ರತಿಯೊಬ್ಬ ಮಕ್ಕಳು ಪ್ರತ್ಯೇಕ ವಾದ ತಾಯಂದಿರನ್ನು ಹೊಂದಿದ್ದರು. ಅರ್ಕೆಲಿಯನನ್ನು ಹೆರೋದ ಅಂತಿಪನನ್ನು ಹೊರತುಪಡಿಸಲಾಗಿದೆ ಅವರಿಬ್ಬರೂ ಒಂದೇ ತಾಯಿಯನ್ನು ಹೊಂದಿದ್ದರು. ಈ ಮೇಲೆ ಕಾಣಿಸಿದ 12 ಜನರಲ್ಲಿ, ಅರಿಸ್ತೂಬೂಲನ ಹೆಸರನ್ನು ಹೊಸ ಒಡಂಬಡಿಕೆಯಲ್ಲಿ ದಾಖಲಿಸಿರುವದಿಲ್ಲ. ಸಲೋಮಿಯ ಹೆಸರು ಇಲ್ಲದಿದ್ದರೂ, ಮತ್ತಾಯ 14 ಮತ್ತು ಮಾರ್ಕ 6ರಲ್ಲಿ “ಹೆರೋದ್ಯಳ ಮಗಳು” ಎಂದು ದಾಖಲು ಮಾಡಲಾಗಿದೆ.

——— ಹೆರೋದ ಮನೆತನದ ವಂಶದವರು ಎಂಬ ಸೂಚನೆ.

– – – ತನ್ನ ಅಣ್ಣನ ಮಗಳ ಸಂಗಡ ಮದುವೆಯಾದ ಹೆರೋದ ಅಂತಿಪನೆಂಬ ಸೂಚನೆ

——— ಹೆರೋದ ಫಿಲಿಪ್ಪ I ತನ್ನ ಅಣ್ಣನ ಮಗಳಾದ, ಹೆರೋದಿಯಳ ಸಂಗಡ ಮದುವೆಯಾದನೆಂಬ ಸೂಚನೆ